O.S .No. 345/2014
PW-1

ದಿನಾಂಕ: 06.01.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ವಿ.ಕೆ. ವಕೀಲರಿಂದ

2 ಮತ್ತು 3 ನೇ ಪ್ರತಿವಾದಿಗಳು 1 ನೇ ಪ್ರತಿವಾದಿಯ ಮಕ್ಕಳು. 1 ರಿಂದ 3 ನೇ ಪ್ರತಿವಾದಿಗಳು ನಿಮ್ಮ ಊರಿನ ನಿಮ್ಮ ಪಕ್ಕದಲ್ಲಿ ವಾಸ ಇದ್ದಾರೆಂದರೆ ಸರಿ. 1 ರಿಂದ 3 ನೇ ಪ್ರತಿವಾದಿಗಳು ಈಗ್ಗೆ 40 ವರ್ಷಗಳಿಂದ ವಾಸವಾಗಿದ್ದಾರೆ. 1 ರಿಂದ 3 ನೇ ಪ್ರತಿವಾದಿಗಳು ವ್ಯವಸಾಯ ಮಾಡುತ್ತಾರೆಂದರೆ ಸರಿ. 1 ರಿಂದ 3 ನೇ ಪ್ರತಿವಾದಿಗಳು ನಿಮ್ಮ ಊರಿನಲ್ಲೇ ಬೇರೆ ಕಡೆ ವಾಸ ಮಾಡುತ್ತಿದ್ದಾರೆಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. 1 ರಿಂದ 3 ನೇ ಪ್ರತಿವಾದಿಗಳು ವ್ಯವಸಾಯ ಮಾಡುವ ಜಮೀನಿನ ಸ.ನಂ. ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ.

1 ರಿಂದ 3 ನೇ ಪ್ರತಿವಾದಿಗಳು ಸ.ನಂ.48/2, 1 ಎಕರೆ 23 ಗುಂಟೆ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆಂದರೆ ಸಾಕ್ಷಿ ಅದು ನಂದು, ಕೊಟ್ಟಿಲ್ಲ ಎಂದು ಹೇಳುತ್ತಾರೆ. 1 ರಿಂದ 3 ನೇ ಪ್ರತಿವಾದಿಗಳು 40 ವರ್ಷದಿಂದ ಅವರೇ ವ್ಯವಸಾಯ ಮಾಡುತ್ತಿದ್ದಾರೆಂದರೆ ಸರಿಯಲ್ಲ.

ನನಗೆ ಓದಲು ಬರುವುದಿಲ್ಲ. ಸ.ನಂ.48/2 ರ ಪಹಣಿಯಲ್ಲಿ 4 ಎಕರೆ ಜಮೀನಿನಲ್ಲಿ ರಾಮೇಗೌಡ ಬಿನ್ ಸಣ್ಣೇಗೌಡ, 1 ಎಕರೆ 9 ಗುಂಟೆ, ಸಣ್ಣೇಗೌಡ ಬಿನ್ ಸಣ್ಣೇಗೌಡ, 1 ಎಕರೆ 8 ಗುಂಟೆ ಮತ್ತು ಶಿವನಂಜೇಗೌಡ ಬಿನ್ ರಾಜೇಗೌಡ, 1 ಎಕರೆ 23 ಗುಂಟೆ ಖಾತೆ ಮಾಡಲಾಗಿದೆ ಎಂದರೆ ಸರಿಯಲ್ಲ. ಉಪವಿಭಾಗಾಧಿಕಾರಿ ರವರ ಕಚೇರಿಯಲ್ಲಿ ಮೇಲ್ಮನವಿ ಸಂ.102/2003-04 ರಂತೆ ಮೇಲ್ಮನವಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ನಮ್ಮಂತೆಯೇ ಆಗಿದೆ ಎಂದು ಹೇಳುತ್ತಾರೆ. ಮೇಲ್ಮನವಿಯನ್ನು ಯಾವ ಕಾರಣಕ್ಕಾಗಿ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ ಜಮೀನು ನನ್ನದು ಎಂದು ಹೂಡಿದ್ದೆ ಎಂದು ಹೇಳುತ್ತಾರೆ. ಮೇಲ್ಮನವಿಯನ್ನು ಪ್ರತಿವಾದಿಗೆ ಆಗಿದ್ದ ಖಾತೆ ವಜಾ ಮಾಡುವಂತೆ ಹೂಡಿದ್ದೀರಿ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ನಿಮ್ಮ ತಮ್ಮ ಸಣ್ಣೇಗೌಡ ಹಾಗೂ 1 ನೇ ಪ್ರತಿವಾದಿಯ ವಿರುದ್ಧ ಹೂಡಿರುತ್ತೀರಿ ಎಂದರೆ ಸರಿ. ಮೇಲ್ಮನವಿಯನ್ನು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ಸೂಚಿಸಿ ಆದೇಶ ಮಾಡಿದ್ದರು ಎಂದರೆ ಸಾಕ್ಷಿ ನನ್ನಂತೆಯೇ ಆಗಿತ್ತು ಎಂದು ಹೇಳುತ್ತಾರೆ. ಪ್ರಸ್ತುತ ದಾವೆಯಲ್ಲಿ ಸಣ್ಣೇಗೌಡರನ್ನು ಪಕ್ಷಗಾರರಾಗಿ ಮಾಡಿಲ್ಲ ಎಂದರೆ ಸರಿ. ಸಣ್ಣೇಗೌಡರನ್ನು ದಾವೆಯಲ್ಲಿ ಪಕ್ಷಗಾರರಾಗಿ ಸೇರಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಅವರಿಗೂ, ನಮಗೂ ಏನು ಇಲ್ಲ ಎಂದು

ಹೇಳುತ್ತಾರೆ.

1 ನೇ ಪ್ರತಿವಾದಿ ಖಾತೆ ಮಾಡಿಸಿಕೊಂಡ ಜಮೀನಿನ ಚೆಕ್ಕುಬಂಧಿ ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ 4 ಎಕರೆ ಜಮೀನಿನ ಚೆಕ್ಕುಬಂಧಿ ಹೇಳಬಲ್ಲೆ, ಅವರು ಅಲ್ಲಿ ಇಲ್ಲದೇ ಇರುವುದರಿಂದ ಹೇಗೆ ಹೇಳಲಿ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ಸುಬರ್ದಿನಲ್ಲಿರುವ 1 ಎಕರೆ 23 ಗುಂಟೆ ಜಮೀನಿನ ಚೆಕ್ಕುಬಂಧಿಃ ಪೂರ್ವಕ್ಕೆಃ ಚೆನ್ನನನ ನಾಗಣ್ಣ, ಪಶ್ಚಿಮಕ್ಕೆಃ ರಸ್ತೆ , ಉತ್ತರಕ್ಕೆಃ ಪುಟ್ಟಸೋಮಪ್ಪ ಮತ್ತು ದಕ್ಷಿಣಕ್ಕೆಃ ನಿಮಗೆ ಸೇರಿದ ಜಮೀನು ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ಸದರಿ ಚೆಕ್ಕುಬಂಧಿಯಲ್ಲಿರುವ ಜಮೀನಿನಲ್ಲಿ 1 ನೇ ಪ್ರತಿವಾದಿ ಪಂಪ್ ಸೆಟ್ ಹಾಗೂ ತೆಂಗಿನ ಮರಗಳನ್ನು ಹಾಕಿರುತ್ತಾರೆಂದರೆ ಸಾಕ್ಷಿ ಅವು ನನ್ನದು ಎಂದು ಹೇಳುತ್ತಾರೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿದ್ದು, ಅದರಲ್ಲಿರುವ ವ್ಯಕ್ತಿ 1 ನೇ ಪ್ರತಿವಾದಿ ಎಂದು ಗುರುತಿಸಿದ್ದು, ಸದರಿ ಭಾವಚಿತ್ರವನ್ನು ನಿಡಿ-**1** ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಕಾಣಿಸುವ ಜಮೀನು 1 ನೇ ಪ್ರತಿವಾದಿಯದ್ದು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನದು ಎಂದು ಹೇಳುತ್ತಾರೆ. ಸಾಕ್ಷಿಗೆ ಮತ್ತೊಂದು ಭಾವಚಿತ್ರವನ್ನು ತೋರಿಸಿದ್ದು, ಅದರಲ್ಲಿರುವ ವ್ಯಕ್ತಿ 1 ನೇ ಪ್ರತಿವಾದಿ ಎಂದು ಗುರುತಿಸಿದ್ದು, ಸದರಿ ಭಾವಚಿತ್ರವನ್ನು ನಿಡಿ-**2** ಎಂದು ಗುರುತಿಸಲಾಯಿತು. ನಿಡಿ-2 ರಲ್ಲಿ ಕಾಣಿಸುವ ಪಂಪ್ ಸೆಟ್ 1 ನೇ ಪ್ರತಿವಾದಿಗೆ ಸೇರಿದ್ದು ಎಂದರೆ ಸಾಕ್ಷಿ ನನ್ನದು ಎಂದು ಹೇಳುತ್ತಾರೆ. ನಿಡಿ-1 ರಲ್ಲಿ ಕಾಣಿಸುವ ತೆಂಗಿನ ಮರ, ನಿಡಿ-2 ರಲ್ಲಿ ಕಾಣಿಸುವ ಪಂಪ್ ಸೆಟ್ 1 ನೇ ಪ್ರತಿವಾದಿಗೆ ಸೇರಿದ್ದು ಎಂದರೆ ಸಾಕ್ಷಿ ನನ್ನದು ಎಂದು ಹೇಳುತ್ತಾರೆ. ಪ್ರತಿವಾದಿ ವ್ಯವಸಾಯ ಮಾಡಿಕೊಂಡು, ಪಂಪ್ ಸೆಟ್ ಹಾಕಿಸಿಕೊಂಡಿರುವ ಜಾಗ ನಿಮ್ಮದು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಜಮೀನು ನಿಮ್ಮದು ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಇದೆ, ಸಮಯ ಕೊಟ್ಟರೇ ಕೊಡುತ್ತೇನೆ ಎಂದು ಹೇಳುತ್ತಾರೆ.

**(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು.)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.